**ಕರ್ನಾಟಕ ಸರ್ಕಾರ**

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಸಾಸಂಇ:ಸುಮಪ:2017-18** **ದಿನಾಂಕ: 29-04-2017**

## ಪತ್ರಿಕಾ ಪ್ರಕಟಣೆ

# ಬಸವಣ್ಣನವರು ವಿಶ್ವಗುರು – ಶ್ರೀಮತಿ ಉಮಾಶ್ರೀ

ಬೆಂಗಳೂರು, ಏಪ್ರಿಲ್ 29 (ಕರ್ನಾಟಕ ವಾರ್ತೆ) :- ಬಸವಣ್ಣನವರು ವಿಶ್ವಗುರು, 12ನೇ ಶತಮಾನದಲ್ಲಿಯೇ ಶೂದ್ರರ ಪರ ದನಿಯಾಗಿದ್ದವರು. ಮಾನವ ಧರ್ಮ ಎತ್ತಿ ಹಿಡಿದ ಮಹಾ ಮಾನವತಾ ವಾದಿ ಎಂದು ಕನ್ನಡ ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶ್ರೀಮತಿ ಉಮಾಶ್ರೀ ಅವರು ಸರ್ಕಾರದ ವತಿಯಿಂದ ಬೆಂಗಳೂರಿನಲ್ಲಿ ಏರ್ಪಡಿಸಿದ್ದ ಬಸವ ಜಯಂತಿ ಆಚರಣೆ ಸಂದರ್ಭದಲ್ಲಿ ಹೇಳಿದರು.

ಬಸವಣ್ಣ ಕಾಯಕ ಜಗತ್ತಿನ ಪ್ರಜ್ಞೆಯನ್ನು ಮೂಡಿಸಿದವರು, ದಾಸೋಹದ ಪರಿಕಲ್ಪನೆ 12ನೇ ಶತಮಾನದಲ್ಲಿಯೇ ಮೂಡಿತ್ತು. ನಾವು ಈಗ ಅದನ್ನೆ ಅಕ್ಷರ ದಾಸೋಹ, ಅನ್ನದಾಸೋಹದ ರೂಪದಲ್ಲಿ ಮುಂದುವರೆಸುತ್ತಿದ್ದೇವೆ. ವಚನ ಸಾಹಿತ್ಯದಲ್ಲಿ ಸಾಮಾಜಿಕ ನ್ಯಾಯ, ಧರ್ಮದರ್ಶನ, ರಾಜನೀತಿ, ಮನೋವಿಜ್ಞಾನ, ಭಾಷಾಜ್ಞಾನ ಎಲ್ಲವೂ ಮೇಳೈಸಿವೆ, ವಚನ ಸಾಹಿತ್ಯದಿಂದಲೇ ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸಿದ ಬಸವಣ್ಣ, ಸಂವಿದಾನ ಶಿಲ್ಪಿ ಬಿ.ಆರ್.ಅಂಬೇಡ್ಕರ್ ರವರು ಪ್ರಾತಃಸ್ಮರಣೀಯರು ಎಂದು ಅವರು ಈ ಸಂದರ್ಭದಲ್ಲಿ ಹೇಳಿದರು.

ಮಾನ್ಯ ಮುಖ್ಯಮಂತ್ರಿಗಳು ವಿದೇಶ ಪ್ರವಾಸದಿಂದ ಹಿಂದಿರುಗಿದ ನಂತರ ಮೇ-03 ರಂದು ಬಸವ ಪುರಸ್ಕಾರ ಹಾಗೂ ಚೌಡಯ್ಯ ಪ್ರಶಸ್ತಿಗಳನ್ನು ವಿತರಿಸುವುದಾಗಿ ಅವರು ಈ ಸಂದರ್ಭದಲ್ಲಿ ಹೇಳಿದರು.

ಮುಂದಿನ ದಿನಗಳಲ್ಲಿ ಅಕ್ಕಮಹಾದೇವಿ ಹಾಗೂ ಕಿತ್ತೂರು ಚೆನ್ನಮ್ಮ ಅವರ ಜನ್ಮ ಜಯಂತಿ ಆಚರಣೆಗಳನ್ನು ಏರ್ಪಡಿಸುವ ಕುರಿತು ತಮ್ಮ ಇಂಗಿತವನ್ನು ವ್ಯಕ್ತಪಡಿಸಿದರು.

ನಗರಾಭಿವೃದ್ಧಿ ಹಾಗೂ ನಗರ ಯೋಜನಾ ಸಚಿವ ಕೆ.ಜೆ.ಜಾರ್ಜ್ ಅವರು ಮಾತನಾಡಿ 12ನೇ ಶತಮಾನದಲ್ಲಿ ಬಸವಣ್ಣನವರು ಪ್ರತಿಪಾದಿಸಿದ ತತ್ವಗಳು ಇಂದಿನ ಸಮಾಜಕ್ಕೂ ಪ್ರಸ್ತುತವಾಗಿವೆ, ಶಾಂತಿ ಸಮಾನತೆಯಿಂದ ಬಾಳಲು ಅವರ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು, ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸಾಮಾಜಿಕ ನ್ಯಾಯ ಸಿಗಬೇಕು ಎನ್ನುವುದು ಪರಿವರ್ತನೆಕಾರ ಹಾಗೂ ಕ್ರಾಂತಿಕಾರಿ ಬಸವಣ್ಣನವರ ಆಶಯವಾಗಿತ್ತು ಎಂದು ಅಭಿಪ್ರಾಯಿಸಿದರು.

ಪೌರಾಡಳಿತ ಹಾಗೂ ಸಾರ್ವಜನಿಕ ಉದ್ದಿಮೆ ಸಚಿವರಾದ ಈಶ್ವರ ಖಂಡ್ರೆ ಅವರು ಮಾತನಾಡಿ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಭಾವಚಿತ್ರ ಇರಬೇಕೆನ್ನುವ ಸುತ್ತೋಲೆಯನ್ನು ಹೊರಡಿಸಿದ ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸಿದರು.

ಬಸವಾದಿ ಶರಣರು ಶೋಷಣೆ, ಅಸ್ಪೃಶ್ಯತೆ ವಿರುದ್ದ 850 ವರ್ಷಗಳ ಹಿಂದೆಯೇ ಹೋರಾಡಿ ಸಮಾಜ ಸುಧಾರಣೆ ತಂದವರು. ಸ್ವಾತಂತ್ರ್ಯ, ಸಮಾನತೆ, ಸಹಬಾಳ್ವೆ, ಸೋದರತ್ವದ ಕನಸು ಕಂಡವರು. ಸಾಮಾಜಿಕ ನ್ಯಾಯದ ಹರಿಕಾರರು, ಶರಣರ ಚಿಂತನೆಗಳು ವೈಚಾರಿಕ ಹಾಗೂ ವೈಜ್ಞಾನಿಕ ಎಂದು ಹೇಳಿದರು.

ವಿಜಯಪುರ ಮಹಿಳಾ ವಿಶ್ವವಿದ್ಯಾನಿಲಯಕ್ಕೆ ಶಿವಶರಣೆ ಅಕ್ಕಮಹಾದೇವಿಯವರ ಹೆಸರನ್ನು ಇಡುವ ಮುಖ್ಯಮಂತ್ರಿಗಳ ಕಾರ್ಯವನ್ನು ಶ್ಲಾಘಿಸಿದರು.

ಹಿರಿಯ ಸಾಹಿತಿ ಗೋ.ರು. ಚನ್ನಬಸಪ್ಪ ಅವರು ಮಾತನಾಡಿ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಭಾವಚಿತ್ರವನ್ನು ಹಾಕುವ ನಿರ್ಧಾರವನ್ನು ಶ್ಲಾಘಿಸಿದರು ಮತ್ತು ಶಾಲಾ ಪಠ್ಯದಲ್ಲಿ ವಚನ ಸಾಹಿತ್ಯ ಕಡ್ಡಾಯವಾಗಬೇಕು ಎನ್ನುವ ಇಚ್ಚೆಯನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಕನ್ನಡ ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಕೆ.ಎ.ದಯಾನಂದ್ ಅವರು ಸ್ವಾಗತ ಕೋರಿದರು, ಪೂಜ್ಯ ಮಹಾ ಪೌರರಾದ ಶ್ರೀಮತಿ ಪದ್ಮಾವತಿ, ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪ, ಉಪಾಧ್ಯಕ್ಷ ಎಂ.ತಿಪ್ಪಣ್ಣ, ಸಾಹಿತಿ, ಚಿಂತಕ ಬಸವರಾಜ್ ಸಬರದ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಕುಮಾರ್ ಕಣವಿ ಹಾಗೂ ಮಾಲಾಶ್ರೀ ಕಣವಿ ಅವರ ವಚನ ಗಾಯನ ಎಲ್ಲರ ಗಮನ ಸೆಳೆಯಿತು.